# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

# KITTURU RANI CHANNAMMA UNIVERSITY

**Vidyasangama, National Highway – 04, Bhootaramanahatti, Belagavi – 591156**
**(NAAC Accredited with B+ Grade – 2021) PM-UShA (MERU)**

**Website:** www.rcub.ac.in
**E-mail:**academic@rcub.ac.in

**ಕುಲಸಚಿವರ ಕಾರ್ಯಾಲಯ**
**Office of the Registrar**

**Phone No.: 0831-2565241**
**0831-2565258**


ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿಮವಿ/ಸ್ನಾತಕೋತ್ತರ/2026-27/1657 ದಿನಾಂಕ: 27-06-2026

## 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆ.

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳಗಾವಿಯ ಮುಖ್ಯ ಆವರಣ, ಹೀರೆಬಾಗೇವಾಡಿಯಲ್ಲಿನ ನೂತನ ಆವರಣ, ಸ್ನಾತಕೋತ್ತರ ಕೇಂದ್ರ ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಮತ್ತು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿಯ ಸ್ನಾತಕೋತ್ತರ ಕೋರ್ಸುಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ ಅರ್ಹ ಸ್ನಾತಕ ವಿದ್ಯಾರ್ಥಿಗಳಿಂದ **ಯು.ಯು.ಸಿ.ಎಂ.ಎಸ್ ತಂತ್ರಾಂಶದ (UUCMS)** https://uucms.karnataka.gov.in Online ಮೂಲಕ **ದಿನಾಂಕ:01-07-2026 ರಿಂದ 20-07-2026** ರವರೆಗೆ ಸ್ನಾತಕೋತ್ತರ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- **ಕೋರ್ಸುಗಳು ಮತ್ತು ಕೇಂದ್ರಗಳು:**

| ಕ್ರ.ಸಂ | ಕೋರ್ಸಗಳು | ಕೋರ್ಸ ಕೇಂದ್ರಗಳು |
|---|---|---|
| 1 | ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಶಿಕ್ಷಣಶಾಸ್ತ್ರ ಹಾಗೂ ಎಮ್.ಬಿ.ಎ. | ಮುಖ್ಯ ಆವರಣ, ವಿದ್ಯಾಸಂಗಮ, ಭೂತರಾಮನಹಟ್ಟಿ |
| 2 | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಗಣಕವಿಜ್ಞಾನ, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗೂ ಎಮ್.ಸಿ.ಎ. | ನೂತನ ಆವರಣ, ವಿಜ್ಞಾನ ಸಂಗಮ ಹೀರೆಬಾಗೇವಾಡಿ |
| 3 | ಕನ್ನಡ ಹಾಗೂ ಇಂಗ್ಲೀಷ. | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ |
| 4 | ಮರಾಠಿ (ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ) | ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ |

| | | |
|---|---|---|
| 5 | ಕನ್ನಡ, ಇಂಗ್ಲೀಷ, ಮರಾಠಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಎಮ್.ಸಿ.ಎ ಹಾಗೂ ಉರ್ದು. | ಸ್ನಾತಕೋತ್ತರ ಕೇಂದ್ರ, ವಚನ ಸಂಗಮ, ತೊರವಿ, ವಿಜಯಪುರ |
| 6 | ಮದ್ಯಸಾರ ತಂತ್ರಜ್ಞಾನ ಮತ್ತು ಸಕ್ಕರೆ ತಂತ್ರಜ್ಞಾನ | ಶ್ರೀ. ಎಸ್. ನಿಜಲಿಂಗಪ್ಪ<br>ಸಕ್ಕರೆ ಸಂಸ್ಥೆ ಮಹಾವಿದ್ಯಾಲಯ, ಬೆಳಗಾವಿ |
| 7 | ಎಂ.ಪಿ.ಇಡಿ - (M.P.Ed) ದೈಹಿಕ ಶಿಕ್ಷಣಶಾಸ್ತ್ರ | 1. ಎಮ್.ಇ.ಎಸ್ ಎಂ.ಪಿ.ಇಡಿ ಕಾಲೇಜು, ಮೂಡಲಗಿ<br>2. ಎಸ್.ಪಿ.ಎಮ್ ಎಂ.ಪಿ.ಇಡಿ ಕಾಲೇಜು, ರಾಯಬಾಗ. |
| 8 | ಎಂ.ಇಡಿ – (M.Ed) ಶಿಕ್ಷಣಶಾಸ್ತ್ರ | ಬಿ.ಎಡ್. ಅಂತಿಮ ಸೆಮಿಸ್ಟರನ ಫಲಿತಾಂಶ ಪ್ರಕಟಣೆ ನಂತರ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |
| 9 | ಎಮ್.ಬಿ.ಎ (MBA) –<br>ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್<br>ಮತ್ತು<br>ಎಮ್.ಸಿ.ಎ (MCA) –<br>ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್ | • ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (KEA) ನಡೆಸಿದ PGCET-2026 ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡುವ ಮೂಲಕ ಪ್ರವೇಶ ಪಡೆದುಕೊಳ್ಳಬಹುದು ಅಥವಾ PGCET-2026 ಪರೀಕ್ಷೆ ಬರೆದ ವಿದ್ಯಾರ್ಥಿಗಳು ನೇರವಾಗಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ MBA ಮತ್ತು MCA ವಿಭಾಗಗಳಲ್ಲಿ ಪ್ರವೇಶಾತಿಯನ್ನು ಪಡೆಯಬಹುದು.<br>• ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (KEA) ಅರ್ಜಿ ಸಲ್ಲಿಸದೆ ಇರುವ ವಿದ್ಯಾರ್ಥಿಗಳು 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆಯಲ್ಲಿ ನೀಡಿದ ವೇಳಾಪಟ್ಟಿಯಂತೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಮುಂದುವರೆದು, ಸದರಿ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ನಡೆಸುವ KRCU-U-CET-2026 ಪರೀಕ್ಷೆ ಮುಖಾಂತರ ಪ್ರವೇಶಾತಿಯನ್ನು ಪಡೆಯಬಹುದಾಗಿದೆ.<br>• ಹೆಚ್ಚಿನ ಮಾಹಿತಿಗಾಗಿ MBA ಮತ್ತು MCA ವಿಭಾಗಗಳನ್ನು ಸಂಪರ್ಕಿಸಬಹುದು. |

- **<u>ಹೆಚ್ಚುವರಿ ಮಾಹಿತಿ:</u>**

➢ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರಗಳನ್ನು ವಿಶ್ವವಿದ್ಯಾಲಯದ ಜಾಲತಾಣ **www.rcub.ac.in** ದಲ್ಲಿ ಪಡೆಯಬಹುದಾಗಿದೆ.

- **ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿನ ಕೋರ್ಸುಗಳ ಅಧ್ಯಯನಕ್ಕೆ ಆಸಕ್ತವಿರುವ ವಿದ್ಯಾರ್ಥಿಗಳು ಸದರಿ ಕೇಂದ್ರದಲ್ಲಿಯೇ, ಆನಲೈನ್ (UUCMS) ಮೂಲಕ ಅರ್ಜಿ ಸಲ್ಲಿಸಿದ ಪ್ರತಿ, ಅರ್ಜಿ ಶುಲ್ಕದ ಪ್ರತಿ ಹಾಗೂ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು "*ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ*" ಕಛೇರಿಯಲ್ಲಿಯೇ ಸಲ್ಲಿಸುವುದು. ಸದರಿ ವಿದ್ಯಾರ್ಥಿಗಳಿಗೆ ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿಯೇ ಪ್ರವೇಶ ಪ್ರಕ್ರಿಯೆಯನ್ನು ಕೈಗೊಂಡು ಪ್ರವೇಶವನ್ನು ನೀಡಲಾಗುವುದು.**
- **ಎಂ.ಪಿ.ಇಡಿ - (M.P.Ed)** ದೈಹಿಕ ಶಿಕ್ಷಣಶಾಸ್ತ್ರ ಕೋರ್ಸ್‌ಗೆ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ **ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ (KRCU Quota)** ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡಲಾಗುವುದು ಹಾಗೂ "ವಿಶ್ವವಿದ್ಯಾಲಯ ಅನುದಾನ ಆಯೋಗ" (UGC) ದಿಂದ ಮಾನ್ಯತೆ ಪಡೆದ ಕರ್ನಾಟಕ ಮತ್ತು ಕರ್ನಾಟಕೇತರ ವಿಶ್ವವಿದ್ಯಾಲಯಗಳಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ಅರ್ಹ ವಿದ್ಯಾರ್ಥಿಗಳು ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರ ಪಡೆದುಕೊಂಡು, ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ **ಆಡಳಿತ ಮಂಡಳಿ ಕೋಟಾದಡಿಯಲ್ಲಿ (Management Quota)** ಪ್ರವೇಶಾತಿಯನ್ನು ಪಡೆಯಬಹುದಾಗಿದೆ.

## ಸೂಚನೆಗಳು:

1. **ಅರ್ಹತಾ ಮಾನದಂಡಗಳು:** ವಿಶ್ವವಿದ್ಯಾಲಯ ಅನುದಾನ ಆಯೋಗ (UGC) ದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಪದವಿ ಪೂರೈಸಿದ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಹಾಗೂ ನಿಯಮಗಳಿಗೆ ಬದ್ಧರಾಗಿರುವ ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿಗೆ ಅರ್ಜಿ ಸಲ್ಲಿಸುವುದು. ಆದ್ದರಿಂದ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸುವ ಮುಂಚೆ, ಪ್ರವೇಶಾತಿ ಅರ್ಹತೆ, ಪ್ರವೇಶ ಶುಲ್ಕ ಹಾಗೂ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ವಿಭಾಗವಾರು ಕೋರ್ಸುಗಳ ಮಾಹಿತಿಯನ್ನು ಕಡ್ಡಾಯವಾಗಿ ವಿಶ್ವವಿದ್ಯಾಲಯದ ಜಾಲತಾಣದಿಂದ (www.rcub.ac.in) ಅಥವಾ ಸ್ನಾತಕೋತ್ತರ ವಿಭಾಗಗಳಿಂದ ಪಡೆದ ನಂತರವೇ ಆನಲೈನ್ UUCMS- https://uucms.karnataka.gov.in ಮೂಲಕ ಅರ್ಜಿ ಸಲ್ಲಿಸುವುದು.
2. **ಪ್ರವೇಶಾತಿಯ ಅರ್ಜಿ ಶುಲ್ಕ:**

| | | |
|---|---|---|
| 1 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ | **ರೂ.250/-** |
| 2 | ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ | **ರೂ.500/-** |

ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸುವರು ಪ್ರತಿ ಕೋರ್ಸ್‌ಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಪಾವತಿಸಬೇಕು.

3. **UUCMS ಸಂಖ್ಯೆಯ ಗುರುತಿನ ಅಗತ್ಯತೆ:** ವಿದ್ಯಾರ್ಥಿಯು UUCMS ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವಾಗ ಸ್ನಾತಕ ಕೋರ್ಸಿನ 10 ಅಂಕಿಯ UUCMS ID ಯನ್ನು ಉಪಯೋಗಿಸಬೇಕು (ಉದಾ: 2200668411) Password ಮರೆತು ಹೋಗಿದ್ದಲ್ಲಿ 'Forgot Password' ಮೂಲಕ Password Retrieve/Reset ಮಾಡಿಕೊಳ್ಳಬಹುದು.
4. **ಮುದ್ರಿತ ಅರ್ಜಿ ಸಲ್ಲಿಕೆ:** UUCMS ನಲ್ಲಿ ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿ (Hard Copy) ಮತ್ತು ಅರ್ಜಿ ಶುಲ್ಕ ಪಾವತಿಸಿದ ರಶೀದಿ ಹಾಗೂ ದೃಢೀಕರಿಸಿದ ಪೂರಕ ದಾಖಲೆಗಳ ಪ್ರತಿಗಳನ್ನು ಖುದ್ದಾಗಿ ಅಥವಾ ಅಂಚೆ ಮುಖಾಂತರ ದಿನಾಂಕ: 21-07-2026 ರೊಳಗೆ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಸ್ನಾತಕೋತ್ತರ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಬೆಳಗಾವಿ -591156 ಈ ವಿಳಾಸಕ್ಕೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5. **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ವಿನಾಯಿತಿ:** ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಒಳಗಿರುವ, ಪ್ರಸ್ತುತ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ಹೊಂದಿರುವ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿರುವ ಶಿಷ್ಯವೇತನಕ್ಕೆ (FREESHIP CARD ಅರ್ಹರಿರುವವರಿಗೆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯದ ಕಡ್ಡಾಯ ಪ್ರವೇಶ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಪ್ರವೇಶಾತಿ ಶುಲ್ಕಗಳಿಗೆ ವಿನಾಯಿತಿ ನೀಡಲಾಗಿದೆ. ಸದರಿ ವಿನಾಯಿತಿ ಪಡೆದ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ಜಮೆಯಾದ ನಂತರ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಭರಿಸತಕ್ಕದ್ದು.
6. **ಒಳಮೀಸಲಾತಿ ಪ್ರಮಾಣ ಪತ್ರ:** ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಒಳಮೀಸಲಾತಿ ಪ್ರಮಾಣ ಪತ್ರವನ್ನು ಪ್ರವೇಶಾತಿ ಸಮಯದಲ್ಲಿ ಸಲ್ಲಿಸುವುದು.
7. **ವಿದ್ಯಾರ್ಥಿಗಳ ಕನಿಷ್ಠ ಪ್ರವೇಶ ಸಂಖ್ಯೆ:** ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯದ ಯಾವುದೇ ವಿಭಾಗ/ಕೋರ್ಸಿನಲ್ಲಿ ಕನಿಷ್ಠ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶ ಪಡೆದಿದ್ದಲ್ಲಿ ಅಥವಾ ನೀಡಿದಲ್ಲಿ ಸದರಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಅಥವಾ ಬೇರೆ ಸಂಯೋಜಿತ ಮಹಾವಿದ್ಯಾಲಯಕ್ಕೆ ವರ್ಗಾಯಿಸಲಾಗುವುದು.
8. **ವಿಶ್ವವಿದ್ಯಾಲಯದ (Counselling) ಪ್ರವೇಶಾತಿ ಸಮಯದಲ್ಲಿ ಮಹಾವಿದ್ಯಾಲಯದ ಆಯ್ಕೆ:** ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪ್ರವೇಶಾತಿ ಸಮಯದಲ್ಲಿ ಸ್ನಾತಕೋತ್ತರ ಮಹಾವಿದ್ಯಾಲಯವನ್ನು ಪ್ರವೇಶಾತಿಗಾಗಿ ಆಯ್ಕೆ ಮಾಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಕೇವಲ ವಿಶ್ವವಿದ್ಯಾಲಯದ ಶುಲ್ಕವನ್ನು ಮಾತ್ರ ಭರಿಸುವುದು ಹಾಗೂ ಉಳಿದ ಮಹಾವಿದ್ಯಾಲಯದ ಪ್ರವೇಶ ಶುಲ್ಕವನ್ನು ಮಹಾವಿದ್ಯಾಲಯದಲ್ಲಿ ಭರಿಸಿ ಪ್ರವೇಶಾತಿ ಪಡೆಯುವುದು. ಒಂದು ವೇಳೆ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿ, ವಿಶ್ವವಿದ್ಯಾಲಯದಲ್ಲಿ ಪ್ರವೇಶ ಶುಲ್ಕವನ್ನು ಭರಿಸಿದಂತಹ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಮಹಾವಿದ್ಯಾಲಯದಲ್ಲಿ ಪ್ರವೇಶಾತಿ ಪಡೆಯದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಭರಿಸಿದ ಪ್ರವೇಶ ಶುಲ್ಕವನ್ನು ಮರುಭರಣ (No-Refund) ಮಾಡಲಾಗುವುದಿಲ್ಲ.
9. **ಬಿ.ಎಡ್ ವಿದ್ಯಾರ್ಥಿಗಳು:** ಬಿ.ಎಡ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿ ಮುಕ್ತಾಯಗೊಳ್ಳುವರೆಗೆ ಸ್ನಾತಕೋತ್ತರ ಪದವಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
10. **ವಿಳಂಬ ಅಥವಾ ಅಪೂರ್ಣ ಅರ್ಜಿಗಳು:** ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಅಥವಾ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11. **ಸದರಿ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ (www.rcub.ac.in ) ಅಥವಾ ಸ್ನಾತಕೋತ್ತರ ವಿಭಾಗಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.**

**ಸಹಿ/-**

ಸಂತೋಷ ಕಾಮಗೌಡ ಕೆ.ಎ.ಎಸ್

**ಕುಲಸಚಿವರು**